ಒಂದು ಸಮುದಾಯದ, ನಾಡಿನ ಸಾಮಾಜಿಕ ಸ್ವಾಸ್ಥ್ಯದ ಬಗೆಗೆ ಒಂದು ಎಚ್ಚರ ಇರಬೇಕು. ತನ್ನ ಅಭಿಪ್ರಾಯ ಮಂಡನೆಯ ಸ್ವಾತಂತ್ರ್ಯವಿದ್ದೂ ಇನ್ನೊಬ್ಬರ ಶ್ರದ್ಧೆ ಮತ್ತು ನಂಬಿಕೆಯನ್ನು ಕೆಣಕುವ ಕದಡುವ ಹಕ್ಕು ಯಾರಿಗೂ ಇಲ್ಲ. ಒಂದು ಧರ್ಮವನ್ನು ಅದು ಯಾವುದೇ ಆಗಿರಲಿ, ಆ ಧರ್ಮ ದೇವರನ್ನು ಧರ್ಮಗ್ರಂಥವನ್ನು ಹೀಗಳೆಯುವ, ಹೀನಾಯಿಸುವ ಪ್ರವೃತ್ತಿ ಅದು ಜೀವ ವಿರೋಧಿತನದ್ದು. ಆ ಸಂದರ್ಭದ 'ಧರ್ಮ ರಾಜಕಾರಣ'ದ ಪ್ರಭಾವಕ್ಕೆ ಸಾವಿನ ಮುನ್ನಿನ ದಿನಗಳಲ್ಲಿ ಕಲಬುರ್ಗಿಯವರು ಒಳಗಾದರೇ? ಆ ಮನಸ್ಥಿತಿಯಲ್ಲಿ ಸ್ವಲ್ಪ ಅವಸರದ ತೀರ್ಮಾನಕ್ಕೆ, ಹೇಳಿಕೆಗೆ ಬಲಿಯಾದರೆ? ಇಲ್ಲ ಎಂದರೆ ಕಲಬುರ್ಗಿಯಂತಹ ದೊಡ್ಡ ವಿದ್ವಾಂಸರು, ದೊಡ್ಡ ಹೃದಯವಂತರು ಹಾಗೆ ಆಡುವುದು ಸಾಧ್ಯವೇ? ಅನ್ನುವ ಪ್ರಶ್ನೆಗಳು ನನ್ನನ್ನು ಮತ್ತೆ ಮತ್ತೆ ಕಾಡುತ್ತಿವೆ.

ನಾನು ಕಲಬುರ್ಗಿಯವರನ್ನು ಕಂಡಿದ್ದು-ಆಡಿದ್ದು ದಿನಮಾನದ ಲೆಕ್ಕಾಚಾರದಲ್ಲಿ 45 ವರ್ಷಗಳ ಗಡಿ ದಾಡಿದೆ. ಅದು 1978ರ ಮೇ ತಿಂಗಳ ಒಂದು ದಿನ ಧಾರವಾಡದಲ್ಲಿ ನಮ್ಮ ಆಪ್ತರಾದ ಖ್ಯಾತ ಸಮಾಜವಿಜ್ಞಾನಿ ಪ್ರೊ.ಎಚ್.ವಿ. ನಾಗೇಶರ ಮನೆಯಲ್ಲಿ. ಆ ಒಂದು ಬೆಳಗ್ಗೆ ನಾಗೇಶರ ತೆರೆದ ಮನೆಯೊಳಗೆ ಇಬ್ಬರು ಗೌರವಾನ್ವಿತರು ಒಳಬಂದರು. ನಿಜವೆಂದರೆ ನನಗೆ ಆ ಇಬ್ಬರ ಪರಿಚಯವಿರಲಿಲ್ಲ. ಆಗಿನ್ನೂ ಗ್ಲೋಬಲ್‌ಲೋಕ ತೆರೆದಿರಲಿಲ್ಲ. ಘಟ್ಟದ ಕೆಳಗಿನ ಕರಾವಳಿಗೂ ಘಟ್ಟದ ಮೇಲಿನ ಊರುಗಳಿಗೂ ಸಂಬಂಧ ಸಂಪರ್ಕ ಸುಲಭವಲ್ಲದ ದಿನಗಳವು. ಅಂದಿನ ಚಾ ಆತಿಥ್ಯ ನನ್ನದಾಗಿತ್ತು. ಆಗ ನಾಗೇಶರು, 'ಇವರು ಎಂ.ಎಂ. ಕಲಬುರ್ಗಿ ಅಂತ, ಇವರು ಸಿದ್ಧಲಿಂಗ ಪಟ್ಟಣಶೆಟ್ಟಿ. ಇಬ್ಬರೂ ಕರ್ನಾಟಕ ವಿಶ್ವವಿದ್ಯಾಲಯದೊಳಗ ಮಾಸ್ತರ್ ಇದಾರಾ. ಈಕೆ ಗಾಯತ್ರೀ, ಎ.ವಿ. ನಾವಡರ ಧರ್ಮಪತ್ನಿ, ಎಂ.ಎ. ಪರೀಕ್ಷೆ ಬರೆಯಾಕ ಕುಂದಾಪುರದಿಂದ ಬಂದಾಳ' ಆ ಮಾತು ಮುಗಿಸುವಲ್ಲೇ 'ಬಿ.ಎ. ಎಲ್ಲಿ ಮಾಡಿದಿ ಮತ್ತ? ಎಂ.ಎ. ಏನ್ ವಿಷಯದಾಗ ಮಾಡಕ್ಹತ್ತಿ? ನಾವಡ ಹೆಂಗಿದಾನ?' ಕಲಬುರ್ಗಿಯವರ ಈ ಪ್ರಶ್ನೆಗಳು ಪ್ರಶ್ನೆಗಳಾಗದೆ ಒಂದು ಆಪ್ತ ಬಾಂಧವ್ಯದ ಧ್ವನಿಯಾಗಿ ನನ್ನೊಳಗೆ ಒಂದು ವಿಶೇಷ ಗೌರವ ಒಡಮೂಡಿತ್ತು ನನಗರಿವಿಲ್ಲದೆ. ಆ ಬಂಧುತ್ವದ ಭಾವ ಇಂದೂ ಹಾಗೇ ಇದೆ ನಮ್ಮಿಬ್ಬರ ಅಂತರಂಗದಲ್ಲಿ.

ಅದು 1983. ಕರ್ನಾಟಕ ವಿ.ವಿ. ಜಾನಪದ ಸಮ್ಮೇಳನದಲ್ಲಿ ನಾನು, ನಾವಡ ಭಾಗಿಯಾಗಿದ್ದೆವು. ದೂರದಲ್ಲಿ ಎಂದಿನ ಟಿಪಿಕಲ್ ಉಡುಪಿನಲ್ಲಿ, ಎಂದಿನ ಟಿಪಿಕಲ್ ನಡೆಯಲ್ಲಿ ಬಂದ ಕಲಬುರ್ಗಿ ನಮ್ಮ 'ದೂರ ದೃಷ್ಟಿಯಿಂದ', 'ಸಮೀಪ ದೃಷ್ಟಿಗೆ' ದಕ್ಕಿದ ಹೊತ್ತು. ನಾವಡರ ಕೈಹಿಡಿದು ಹೆಗಲಿಗೆ ಕೈಯಿಟ್ಟು ಉಪಾಹಾರಕ್ಕೆ ನಮ್ಮನ್ನು ಕರೆದೊಯ್ದು ಜೊತೆಯಾಗಿ ಸ್ವೀಕರಿಸಿದ್ದು, ಸಾಹಿತ್ಯಕ, ಸಾಂಸ್ಕೃತಿಕ ಚರ್ಚೆ ಹರಟಿದ್ದು, ಆ ಸರಳತೆಗೆ ನಾನು ಬೆರಗಾಗಿದ್ದೆ. ಅದು ನಾವು ದಂಪತಿಗಳು 'ಕಾಡ್ಯನಾಟ-ಕಾಳಿಂಗ ಸರ್ಪಾರಾಧನೆ'ಗೆ ಸಂಬಂಧಿಸಿದ ಸಂಶೋಧನೆಗೆ ತೊಡಗಿಕೊಂಡಿದ್ದ ಹೊತ್ತು. ಕಾಡ್ಯನಾಟದ ಬಗ್ಗೆ ಕಲಬುರ್ಗಿಯವರು ಎಷ್ಟು ಕುತೂಹಲದಿಂದ ಕೇಳಿದ ಪ್ರಶ್ನೆ, ಮರುಪ್ರಶ್ನೆಯಲ್ಲಿ ಅವರೊಳಗೊಬ್ಬ ಸೂಕ್ಷ್ಮ ಸಂಶೋಧನಾ ವಿದ್ಯಾರ್ಥಿ ಎದ್ದು ನಿಂತಿದ್ದ. ಜೊತೆಗೆ ಸಂಶೋಧಕ ನಿತ್ಯ ನಿರಂತರ ಅಧ್ಯಯನಶೀಲನಾಗಿರಬೇಕು, ಸತ್ಯದ ಪ್ರತಿಪಾದಕನಾಗಿರಬೇಕು, ಕಂಡ ಸತ್ಯವನ್ನು ಪ್ರಕಟಿಸುವ ಬದ್ಧತೆ ಇರಬೇಕು ಎನ್ನುವಲ್ಲಿ ಒಬ್ಬ ಧೀಮಂತ ಗುರುವನ್ನು ಕಂಡೆ. ಹೀಗೆ ಏಕಕಾಲಕ್ಕೆ ಶಿಷ್ಯನೂ ಆಗುವ, ಗುರುವೂ ಆಗುವ ಪರಿಯಲ್ಲಿಯೇ ಕಲಬುರ್ಗಿಯವರು ಮಾದರಿಯಾಗುವುದು. ಕಾಡ್ಯನಾಟದ ಮೌಖಿಕ ಪಠ್ಯದಲ್ಲಿ 'ಶಂಕರಗಂಡ' ಎಂಬ ಪದದ ಅರ್ಥ ವ್ಯಾಖ್ಯೆಯ ಹುಡುಕಾಟದಲ್ಲಿ ಮೇರ ಸಮುದಾಯದವರೊಂದಿಗೆ ಸಂವಾದ, ಹಿರಿಯ ವಿದ್ವಾಂಸರೊಂದಿಗೆ ಪತ್ರ ವ್ಯವಹಾರ ನಡೆಸಿದೆವು. ಅನೇಕರು ಉತ್ತರಿಸಲಿಲ್ಲ. ಆದರೆ ಮರು ಟಪಾಲಿಗೆ ಬಂದ ಅಂಚೆಕಾರ್ಡು ಕಲಬುರ್ಗಿಯವರದ್ದು. 'ಇದು ಒಂದು ಬಗೆಯ ಭತ್ತದ ತಳಿ' ಎನ್ನುವ ಉತ್ತರ ಹೊತ್ತು. ನಿಜವಾದ ಒಬ್ಬ ಸಂಶೋಧಕನ ಬದ್ಧತೆ ಎಂದರೆ ಇದು. ಈ ಬದ್ಧತೆ ಅವರ ಬದುಕಿನ ಉದ್ದಕ್ಕೂ ಅವರು ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದಾಗಲೂ ಹಾಗೆಯೇ ಇತ್ತು. ಈ ಅಧ್ಯಯನ-ಅಧ್ಯಾಪನವೇ ಅವರನ್ನು ನಿಜದ ಗುರುವಾಗಿಸಿದ್ದು ಕೂಡ. ಮಳೆಗಾಲದ ಸೂರ್ಯನ ಕಣ್ಣು ಮುಚ್ಚಾಲೆಯಂತೆ ನಾನು ಕಲಬುರ್ಗಿಯವರನ್ನು ಆಗಾಗ್ಗೆ ಕಂಡಿದ್ದು, ಮಾತಾಡಿದ್ದು ಹಲವು ಬಾರಿ ಅಲ್ಲಲ್ಲಿ